| |
|---|
| Form No.4 (Civil) Deposition Sheets (R.P.No.57) |

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 64/2021

ಪ್ರಾ.ಸಾ. 1 ಚಾ.ಸಾ 1

| | | |
|---|---|---|
| ಹೆಸರು | : | ರಾಜಪ್ಪ |
| ತಂದೆಯ ಹೆಸರು | : | ಲಕ್ಷ್ಮಣ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಅಲ್ಲಿಪುರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 09-04-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-5 ಅಮೃತಮ್ಮ ನನ್ನ ಹೆಂಡತಿ ಆಗಿರುತ್ತಾಳೆ. ಚಾಸಾ-6 ರಿಂದ 9 ನನ್ನ ಮಕ್ಕಳು ಆಗಿರುತ್ತಾನೆ. ಚಾಸಾ-10 ನನ್ನ ಅಣ್ಣ ಆಗಿರುತ್ತಾನೆ. ಚಾಸಾ-14 ರಿಂದ 16 ರವರ ಪರಿಚಯ ಇರುತ್ತದೆ. ಮೃತ ದೇವಪ್ಪ ನನ್ನ ಮಗನಾಗಿರುತ್ತಾನೆ. ಆರೋಪಿಯ ಪರಿಚಯ ಇರುತ್ತದೆ.

2. ಸುಮಾರು 5 ವರ್ಷಗಳ ಹಿಂದೆ ರಾತ್ರಿ 10.30-11.00 ಗಂಟೆ ಸುಮಾರು ಮಹಾದೇವಪ್ಪ ಎನ್ನುವವರ ಮಗ ಕುಸ್ತಿಯಲ್ಲಿ ಗೆದ್ದು ಕಡಗವನ್ನು ತಂದಿದ್ದರಿಂದ ಮೆರವಣಿಗೆ ನಡೆದಿದ್ದು. ಆಗ ನನ್ನ ಮಗ ದೇವಪ್ಪ ಮನೆಯಿಂದ ರಾತ್ರಿ 8.30 ಗಂಟೆ ಬಿಟ್ಟು ಅದನ್ನು ನೋಡಲು ಹೋಗಿರುತ್ತಾನೆ. ಆಗ ರಾತ್ರಿ 10.00-10.30 ಗಂಟೆ ಆದರು ದೇವಪ್ಪ ಮನೆಗೆ ಬಂದಿರುವುದಿಲ್ಲ. ಆಗ ನನ್ನ ಮಗನನ್ನು ಹುಡುಕಾಡಿರುತ್ತೇವೆ ಆದರು ಸಿಕ್ಕಿರುವುದಿಲ್ಲ. ಮರುದಿನ ಬೆಳಿಗ್ಗೆ 6.00 ಗಂಟೆ ಪುನಃ ಹುಡುಕಲು ಪ್ರಾರಂಭಿಸಿರುತ್ತೇವೆ. ರಾಜಪ್ಪ ಎನ್ನುವವರ

ಮನೆಯ ಹತ್ತಿರ ನನ್ನ ಮಗ ಮೃತದೇಹ ಕಂಡು ಬಂದಿರುತ್ತದೆ. ಸದರಿ ಮೃತದೇಹವನ್ನು ಚಾಸಾ-7 ರವರು ನೋಡಿ ಹೇಳಿರುತ್ತಾನೆ ನಂತರ ನಾನು ಹೋಗಿ ನನ್ನ ಮಗ ಮೃತ ದೇಹವನ್ನು ನೋಡಿರುತ್ತೇನೆ. ನನ್ನ ಮಗನ ಮುಖಕ್ಕೆ ಹಾಗೂ ದವಡೆಗೆ ಪೆಟ್ಟಾಗಿತ್ತು. ಕಲ್ಲು ಎತ್ತಿ ಹಾಕಿದ ಗಾಯ ನನ್ನ ಮಗನ ಮೈಮೇಲೆ ಕಂಡು ಬಂತು. ಚಾಸಾ-10 ರವರು ನನ್ನ ಹತ್ತಿರ ಬಂದು ಸಾಬಣ್ಣ ತಂದೆ ಮಲ್ಲಪ್ಪ, ಮರಿಯಪ್ಪ ತಂದೆ ಜಾನಪ್ಪ, ಭಾಸ್ಕರ ತಂದೆ ಸಾಬಣ್ಣ, ಯೇಸಪ್ಪ ತಂದೆ ಸಾಬಣ್ಣ, ರಾಜಪ್ಪ ತಂದೆ ಯೇಸಪ್ಪ, ದಶವಂತ ತಂದೆ ಶಾಂತಪ್ಪ ಈ ಆರು ಜನರು ನನ್ನ ಮಗನಿಗೆ ಹೊಡೆದಿರುತ್ತಾರೆ ಎಂದು ನನಗೆ ಸಂಶಯ ಇತ್ತು. ಈ ಘಟನೆಗಿಂತ ನಾಲ್ಕು ದಿನ ಮುಂಚೆ ನನ್ನ ಮಕ್ಕಳು ಗುಡಿ ಕಟ್ಟೆಯ ಕುಳಿತ ಸಲುವಾಗಿ ಈ ಮೇಲೆ ಹೇಳಿದಂತ ಆರು ಜನರವರೊಂದಿಗೆ ಜಗಳ ಆಗಿತ್ತು. ಈ ಮೇಲೆ ಹೇಳಿದ ಆರು ಜನರ ಮೇಲೆ ದೂರು ಕೊಟ್ಟಿರುತ್ತೇವೆ. ಸದರಿ ದೂರುನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.1** ಎಂದು ಗುರುತಿಸಲಾಯಿತು. ನಿ.ಪಿ.1 ಅನ್ನು ಕೊಟ್ಟ ಮೇಲೆ ನನ್ನ ಸಮಕ್ಷಮ ಬೇರೆ ಏನನ್ನು ಮಾಡಿರುವುದಿಲ್ಲ. ಪುನಃ ನನ್ನನ್ನು ಕರೆಯಿಸಿ ಬೇರೆ ಏನನ್ನು ಮಾಡಿರುವುದಿಲ್ಲ. ಸಾಕ್ಷಿದಾರರಿಗೆ ಈಗ ಶವಪಂಚನಾಮೆ ಕಾಲಕ್ಕೆ ತೆಗೆದಂತಹ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು **ನಿ.ಪಿ.2 ಮತ್ತು 3** ಎಂದು ಗುರುತಿಸಲಾಯಿತು.

(**ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.**)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

3. ನಿ.ಪಿ.1 ಅನ್ನು ಕೊಟ್ಟಂತಹ ದಿನ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಮಧ್ಯಾಹ್ನ 2.15-3.15 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಚಾಸಾ-2 ಮತ್ತು 3 ರವರನ್ನು

ಕರೆದುಕೊಂಡು ಬಂದಿದ್ದರು ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಸ್ಥಳದಿಂದ ಮಾದರಿಯ ಮಣ್ಣು ಮತ್ತು ಮಾದರಿಯ ರಕ್ತ ಮಿಶ್ರಿತ ಮಣ್ಣು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಿ.ಪಿ.1 ರಲ್ಲಿ ಮೃತನು ಚರ್ಚ ಹತ್ತಿರ ಕುಳಿತ ವಿಷಯವಾಗಿ ಆರೋಪಿ ಹಾಗೂ ಇತರರೊಂದಿಗೆ ತಕರಾರು ಮಾಡಿ ಜಗಳ ತೆಗೆದು ಬಾಯಿ ಮಾಡಿಕೊಂಡಿದ್ದರು ಎಂದು ಬರೆಸಿದೇನೆ ಎಂದರೆ ಸರಿ.

4. ದಿಃ 28.01.2021 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ದಿಃ15.01.2021 ರಂದು ರಾತ್ರಿ 10.45-11.10 ರ ಸಮಯದಲ್ಲಿ ಆರೋಪಿ ಸಾಬಣ್ಣ ನನ್ನ ಮಗನನ್ನು ಕರೆದುಕೊಂಡು ರಾತ್ರಿ ಹೋಗುವುದನ್ನು ಚಾಸಾ-15 ಮತ್ತು 16 ರವರು ನೋಡಿರುವುದಾಗಿ ನಮಗೆ ಹೇಳಿದ್ದರಿಂದ ಅದಕ್ಕೆ ನ್ಯಾಯಾಲಯದ ಮುಂದೆ ಇರುವ ಆರೋಪಿ ಕರೆದುಕೊಂಡು ಹೋಗಿ ಹೊಡೆದ ಎಂದು ಗೊತ್ತಾಯಿತು ಎಂದು ಪುರವಣಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ.ಸಿ.ಎಸ್.ಎಮ್.ಪಿ. ವಕೀಲರಿಂದ</u>

- ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು ಅನುಮತಿಸಲಾಯಿತು.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.